# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/ 312 /ಗ್ರಾಪಂಅ/2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 17-06-2014.

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

ಇವರಿಗೆ:
ಹಿರಿಯ ತಾಂತ್ರಿಕ ನಿರ್ದೇಶಕರು,
ಎನ್‌ಐಸಿ,
**ಬೆಂಗಳೂರು.**

ಮಾನ್ಯರೆ,

ವಿಷಯ: ಇ-ಸ್ವತ್ತು ತಂತ್ರಾಂಶದಲ್ಲಿ ನಮೂದಾಗದಿರುವ ಗ್ರಾಮಗಳನ್ನು ಅಳವಡಿಸುವ ಕುರಿತು.

ಉಲ್ಲೇಖ:
1. ಇದೇ ಸಮಸಂಖ್ಯೆಯ ನಿರ್ದೇಶಕರು (ಪಂ.ರಾಜ್) ರವರ ಅರೆ ಸರ್ಕಾರಿ ಪತ್ರ ದಿನಾಂಕ:22-05-2014
2. ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ. ರವರ ಇ-ಮೇಲ್ ಸಂದೇಶ ದಿನಾಂಕ:24-05-2014.
3. ಇದೇ ಸಮಸಂಖ್ಯೆಯ ಸರ್ಕಾರದ ಪತ್ರ ದಿನಾಂಕ:02-06-2014
4. ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ. ರವರ ಇ-ಮೇಲ್ ಸಂದೇಶ ದಿನಾಂಕ:10-06-2014.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ.

ಇ-ಸ್ವತ್ತು ತಂತ್ರಾಂಶದಲ್ಲಿ ನಮೂದಾಗದೆ ಇರುವ ಗ್ರಾಮಗಳನ್ನು ಅಳವಡಿಸುವ ಕುರಿತು ಉಲ್ಲೇಖ (1) ಮತ್ತು (3) ರ ಸರ್ಕಾರದ ಪತ್ರಗಳಲ್ಲಿ ಸವಿವರವಾಗಿ ತಿಳಿಸಲಾಗಿದೆ. ಉಲ್ಲೇಖ (4) ರ ಕಡೆಗೆ ತಮ್ಮ ಗಮನ ಸೆಳೆಯುತ್ತಾ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, !993 ರ ಪ್ರಕರಣ 4 ರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ಹೊರಡಿಸಿದ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಗ್ರಾಮವನ್ನಾಗಲೀ ಅಥವಾ ಗ್ರಾಮಗಳ ಸಮೂಹವನ್ನಾಗಲೀ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಸೇರಿಸಬೇಕಾಗಿರುತ್ತದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಆದ್ದರಿಂದ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮ ಮತ್ತು ಗ್ರಾಮಗಳ ಸಮೂಹವನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಅಗತ್ಯ ಕ್ರಮವನ್ನು ಅತ್ಯಂತ ಜರೂರಾಗಿ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಕೋರಿದೆ.

(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ರವರಿಂದ ಅನುಮೋದಿತ)

ತಮ್ಮ ವಿಶ್ವಾಸಿ,

17/6/14

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
1. ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಾಹಿತಿ ಸೂಚನಾಧಿಕಾರಿಗಳು.
4. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.